

ಎಂದೆ? ಗೋಡೆ ಮೇಲೆಲ್ಲ ಗೀಚುತ್ತಾನೆ ಎಂದಳು. ಚೂಡಿದಾರ ಹಾಕಿದ್ದ ಇನ್ನೊಬ್ಬಳು ತನ್ನ ಮಗುವಿನ ರಟ್ಟೆ ಹಿಡಿದು ಎಳೆದಾಡುತ್ತಿದ್ದಳು. ಏಕೆ, ಏನಾಯ್ತು ಎಂದೆ. ಅವರಜ್ಜಿಯ ಬಿಕ್ಕಳಿಕೆ ಬತ್ತಳಿಕೆಯಿಂದ ಬಾಣ ತೆಗೆದು ತೆಗೆದು ನನಗೆ ಬಿಡುತ್ತಾನೆ ಎಂದಳು. ಅಲ್ಲೇ ಇದ್ದ ಸ್ವಿಮಿಂಗ್ ಪೂಲ್ ಪಕ್ಕ ಪಾರ್ಟಿ ನಡೆದಿತ್ತು. ಗಗನಚುಂಬಿ ಕಟ್ಟಡದ ವಿಮಾನ ಚುಂಬಿ ಚೆಲುವ ಚೆಲುವೆಯರೆಲ್ಲ ಕುಡಿದು ಕುಣಿಯುತ್ತಿದ್ದರು. ಕೆಲವರು ಬೆಂಕಿ ಹಾಕಿ ಕುಣಿದರೆ ಚೆನ್ನಾಗಿರುತ್ತೆ ಎಂದರು. ವೇಸ್ಟ್ ಪುಸ್ತಕಗಳನ್ನು ರಾಶಿ ಹಾಕಿ ಸುಡೋಣ ಎಂದು ಒಬ್ಬನೆಂದ. ಅವರ ತಾತ, ಮುತ್ತಾತನ ಕಾಲದ ಅವರವರ ಮಾತೃಭಾಷೆಯ ಪುಸ್ತಕಗಳನ್ನೆಲ್ಲ ತಂದು ತಂದು ಸುರಿದು ಕಡ್ಡಿ ಗೀರಿದರು. ಸ್ವಲ್ಪ ಹೆಂಡ ಸುರಿದರು. ಕ್ಷಣಾರ್ಧದಲಿ ಸುಟ್ಟು ಬೂದಿಯಾಯ್ತು. ಚಳಿ ಜಾಸ್ತಿಯಾಗುತ್ತಾ ಇತ್ತು. ನಮ್ಮ ಬೆಂಕಿಗೆ ಆಹುತಿ ಇನ್ನೂ ಬೇಕಾಗಿದೆ ಬನ್ನಿ ಹುಡುಕೋಣ ಎಂದು ಮಾತಾಡಿಕೊಂಡರು. ಒಬ್ಬ ತಂದೆ ಅಟ್ಟ ಸೇರಿದ್ದ ಅಟ್ಟಗುಣಿ ಮಣೆ ತಂದ. ಒಬ್ಬ ತಂದೆ ಪೆನ್ಸಿಲ್ಲುಗಳನ್ನು ತಂದ. ಒಬ್ಬ ತಂದೆ ತನ್ನ ಮಕ್ಕಳು ಗೀಚಿದ್ದ ಡ್ರಾಯಿಂಗ್ ಶೀಟುಗಳನ್ನು ತಂದ. ಒಬ್ಬ ತಂದೆ ತನ್ನ ತಂದೆ ಮತ್ತು ತಾತ ನುಡಿಸುತ್ತಿದ್ದ ಹಳೆಯ ಹಾರ್ಮೋನಿಯಂ ಪೆಟ್ಟಿಗೆ ತಂದ. ಒಬ್ಬಳು ತನ್ನ ಅಜ್ಜಿಯ ತಂಬೂರಿ ತಂದಳು. ಕೆಂಗೈಗಳನ್ನು ಚಾಚಿದ ಬೆಂಕಿ, ಕುಡಿದು ಮನುಷ್ಯರ ಕುಣಿತಕ್ಕೆ ಚೆನ್ನಾಗಿ ಕೀ ಕೊಟ್ಟಿತು.

ಆಕಾಶ ನೋಡಿ ನೋಡಿ ಸೋತಿದ್ದ ನನಗೆ ನಕ್ಷತ್ರಗಳು ಏಕೆ ಕಾಣಲಿಲ್ಲ ಎಂದು ಆಗ ಅರ್ಥವಾಯಿತು.

* * *

## ನಡಿಗೆ

ಮಕ್ಕಳೇ ಈ ಮಳೆ ನಿಲ್ಲುವುದಿಲ್ಲ. ಆದ್ದರಿಂದ ನಾವೂ ನಿಲ್ಲುವುದು ಬೇಡ. ದಾರಿಗೆ ಇಳಿದು ಬಿಡೋಣ. ಎರಡೂ ಕೈಗಳನ್ನು ಮೇಲೆ ಚಾಚಿ. ಬಿದ್ದು ಮಣ್ಣಾಗುವ ಹನಿಗಳ ಹಿಡಿಯಿರಿ. ನಾವು ಹೋಗಿ ತಲುಪಲಾಗದ ದೂರದ ಆಕಾಶವನ್ನು ಮುಟ್ಟಿದೆವು ಎಂದು ನಿಮಗೆ ಅನಿಸಲಿಲ್ಲವೇ...? ನಾಲಿಗೆ ಚಾಚಿರಿ. ಅಲ್ಲೂ ಬೀಳಲಿ ಹನಿ. ಈಗ ಮಾತಾಡಿ. ನಿಮ್ಮ ಧ್ವನಿಯಲ್ಲಿ ಎಷ್ಟೊಂದು ಹಾರಾಟವಿದೆ ನೋಡಿ. ಧ್ವನಿ ತುಂಬಾ ಹಗುರವಾಗುತ್ತಿದೆ. ಭಾರವಾದ ದೇಹ, ಭಾರವಾದ ಬದುಕನ್ನು ಹಗುರವಾಗಿಸುತ್ತದೆ. ನಿಮ್ಮ ಅವೇ ಕೈಗಳು ಮುಟ್ಟಲಾಗದ್ದನ್ನು ಮಟ್ಟಿದವು. ನಿಮ್ಮ ಅವೇ ಧ್ವನಿಗಳು ನಿಮ್ಮ ಭಾರವನ್ನು ಹಗುರ ಮಾಡಿದವು. ಎಲ್ಲೋ